# ಜೋಗಿಮಟ್ಟಿ ಎಂಬ ಪಕ್ಷಿ ಸ್ವರ್ಗ



ಬರ್ಡ್‌ಲೈಫ್ ಇಂಟರ್‌ನ್ಯಾಷನಲ್ ಎಂಬ ಸಂಸ್ಥೆ ಕಳೆದೆರಡು ದಶಕಗಳಲ್ಲಿ ಜಗತ್ತಿನಾದ್ಯಂತ ಸಾಕಷ್ಟು ಅಧ್ಯಯನ ನಡೆಸಿ, ಅಳಿವಿನಂಚಿನಲ್ಲಿರುವ ಪಕ್ಷಿಗಳಿರುವ ಪ್ರದೇಶಗಳನ್ನು ಗುರುತಿಸಿದೆ ಈ ಪ್ರದೇಶಗಳನ್ನು ಅತಿಮುಖ್ಯ ಪಕ್ಷಿ ತಾಣಗಳೆಂದು ಕರೆಯಲಾಗದೆ (ಇಂಪಾರ್ಟೆಂಟ್ ಬರ್ಡ್ ಏರಿಯಾಸ್ – ಐಬಿಎ). ಈ ಸ್ಥಳಗಳಲ್ಲಿರುವ ಪಕ್ಷಿಗಳು ಅಳಿದು ಹೋಗಬಹುದಾದ ಅಪಾಯವನ್ನು ಎದುರಿಸುತ್ತಿದೆ. ಈ ಸ್ಥಳಗಳನ್ನು ಆಯಾ ಸರ್ಕಾರ, ಸಂಘಸಂಸ್ಥೆ ಹಾಗೂ ಜನರು ವಿಶಿಷ್ಟ ಕಾರ್ಯಕ್ರಮಗಳನ್ನು ಹಾಕಿಕೊಂಡು, ಈ ಆವಾಸಗಳನ್ನು (ಹ್ಯಾಬಿಟಾಟ್) ರಕ್ಷಿಸುವುದರ ಮೂಲಕ ಪಕ್ಷಿಗಳ ಉಳಿವಿಗೂ, ತಮ್ಮ ಪರಿಸರ ರಕ್ಷಣೆಗೂ ಮುಂದಾಗಲಿ ಎಂಬುದು ಆ ಸಂಸ್ಥೆಯ ಆಶಯ.

ಕರ್ನಾಟಕದಲ್ಲಿ ಹೀಗೆ ಜಾಗತಿಕವಾಗಿ ಪ್ರಮುಖವಾಗಿರುವ ೩೭ ತಾಣಗಳಿದೆ. ಅಸ್ಸಾಂ ರಾಜ್ಯವನ್ನು ಹೊರತುಪಡಿಸಿದರೆ, ಕರ್ನಾಟಕವೇ ಅತಿ ಹೆಚ್ಚಿನ ಸಂಖ್ಯೆಯ ಪ್ರಮುಖ ಪಕ್ಷಿ ತಾಣಗಳಿರುವ ರಾಜ್ಯ. ಇದು ರಾಜ್ಯದ ಹೆಮ್ಮೆಯೂ ಸಹ.

ಇಂತಹ ಅತಿಮುಖ್ಯ ಪಕ್ಷಿ ತಾಣಗಳಲೊಂದು ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ಟಿ ಕಾಯ್ದಿಟ್ಟ ಅರಣ್ಯ. ಇದರ ಕೆಲವು ವಿವರಗಳು ಇಂತಿವೆ:




ಐಬಿಎ ಸಂಕೇತ: ಐಎನ್–ಕೆಎ–೧೩
ಅಕ್ಷಾಂಶ ರೇಖಾಂಶ: ೧೪'೧೩" ಉ, ೭೬'೧೩"೦೦ ಪೂ
ವಿಸ್ತೀರ್ಣ: ೧೦,೭೧೮ ಹೆಕ್ಟೇರ್
ಎತ್ತರ: ೫೦೦–೧,೧೦೦ ಮಿ
ಮಳೆ: ೩೫೦ – ೪೫೦ ಮಿಮಿ
ತಾಪಮಾನ: ೭ ರಿಂದ ೪೨ ಡಿಗ್ರಿ ಸೆಲ್ಸಿಯಸ್
ಆವಾಸ: ಉಷ್ಣವಲಯದ ಒಣ ಮುಳ್ಳುಕಾಡುಗಳು

ಐಬಿಎ ಸಂರಕ್ಷಣಾ ಮಾನದಂಡ: ಎ೧, ಎ೨
ರಕ್ಷಣೆ: ಅರಕ್ಷಿತ / ಕಾಯ್ದಿಟ್ಟ ಅರಣ್ಯ

ಸ್ಥಳೀಯವಾಗಿಯೂ ಜಾಗತಿಕವಾಗಿಯೂ ಗಂಡಾಂತರಕ್ಕೊಳಗಾಗಿರುವ ಹಳದಿ ಗಂಟಲಿನ ಪಿಕಳಾರ (***Pycnonotus xantholaemus***)ದ ಅತ್ಯುತ್ತಮ ಸಂಖ್ಯೆ ಇಲ್ಲಿ ಕಂಡುಬರುತ್ತದೆ ಯಾದ್ದರಿಂದ. ಇದನ್ನು ಅತಿಮುಖ್ಯ ಪಕ್ಷಿತಾಣ ಎಂದು ಗುರುತಿಸಲಾಗಿದೆ. ಇಲ್ಲಿ ಗಂಡಾಂತರಕ್ಕೊಳಗಾಗಿರುವ ಬಿಳಿ ಬೆನ್ನಿನ ರಣಹದ್ದುಗಳನ್ನೂ (***Gyps bengalensis***) ಕಾಣಬಹುದಾಗಿದೆ. ಪಕ್ಷಿಗಳ ಕುರಿತು ಸಾಕಷ್ಟು ಅಧ್ಯಯನ ನಡೆಯದ ಈ ಪ್ರದೇಶದಲ್ಲಿ ಸುಮಾರು ೧೧೦ ಪಕ್ಷಿ ಪ್ರಭೇದಗಳನ್ನು ಗುರುತಿಸಲಾಗಿದೆ.



ಸಾಕಷ್ಟು ಹಾನಿಗೊಳಗಾಗಿದ್ದ ಈ ಪ್ರದೇಶವನ್ನು ರಾಜ್ಯ ಅರಣ್ಯ ಇಲಾಖೆಗೆ ಒಪ್ಪಿಸಿದ ಮೇಲೆ ಉತ್ತಮವಾಗಿ ಅಭಿವೃದ್ದಿಯಾಗಿದೆ. ಸ್ಥಳೀಯ ಸಸ್ಯಗಳಿಂದ ಅರಣ್ಯೀಕರಣವಾಗಿದೆ. ೧೮೯೦ರಲ್ಲಿ ಅದುವರಗಿನ ಒತ್ತುವರಿಯನ್ನು ಪತ್ತೆಹಚ್ಚಿ ತೆರೆವುಗೊಳಿಸಲಾಗಿದೆ. ಚಿತ್ರದುರ್ಗದ ಪಶ್ಚಿಮ ಭಾಗದಲ್ಲಿನ ಅಡಿಕೆ ಮತ್ತು ತೆಂಗು ಬೆಳೆಯಿಂದಾಗಿ ಈ ಕಾಡುಗಳ ಮೇಲಿನ ಉರುವಲು ಸಂಗ್ರಹ ಒತ್ತಡ ಕಡಿಮೆಯಾಗಲು ಸಹಕಾರಿಯಾಗಿದೆ. ಈ ಎಲ್ಲ ಒಳ್ಳೆಯ ಕೆಲಸಗಳು ಫಲ ನೀಡಿದ್ದು, ಮಾದರಿ ಅರಣ್ಯ ಸಂರಕ್ಷಣೆ ಎನಿಸಿದೆ. ಗಂಡಾಂತರದಲ್ಲಿರುವ "ಹಳದಿ ಗಂಟಲಿನ ಪಿಕಳಾರ"ಗಳ ವೃದ್ಧಿಯಾಗಿರುವ ಸಂಖ್ಯೆ, ಉತ್ತಮ ನಿರ್ವಹಣೆಯ ಫಲ. ಆದರೂ ಕಳ್ಳ ಬೇಟೆ ಹಾಗೂ ಅಕ್ರಮ ಉರುವಲು ಸಂಗ್ರಹವನ್ನು ತಡೆಗಟ್ಟಬೇಕಾಗಿದೆ. ಮುಖ್ಯವಾಗಿ ಈ ಭಾಗದ ಅಪರೂಪ ಕಾಡನ್ನು ಹಾಗೂ ಅಲ್ಲಿನ ಪ್ರಾಣಿಗಳ ಕುರಿತ ಅಧ್ಯಯನಗಳು ಇನ್ನಾದರೂ ತೊಡಗಬೇಕಿದೆ. ಜನರಿಗೆ ಶಿಕ್ಷಣವನ್ನೂ ನೀಡುವತ್ತ ಸಹ ತೀವ್ರ ಗಮನ ಹರಿಸಬೇಕಾಗಿದೆ.

– ಕೆ.ಎಸ್. ನವೀನ್, ೯೪೪೮೯-೦೫೨೧೪ ksn.bird@gmail.com